ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತೊಂದನೆಯ ಅಧಿವೇಶನ
ಶುಕ್ರವಾರ, ದಿನಾಂಕ: 25ನೇ ಸೆಪ್ಟಂಬರ್, 2020

ರಾಯಸಂದ್ರ ಅಮೃತ್ ಮಹಲ್ ಕಾವಲ್‌ಗೆ ಸೇರಿದ ಜಾಗದ ಬಗ್ಗೆ

ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

620 (728) ಮಾನ್ಯ ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ರಾಯಸಂದ್ರ ಕಾವಲು ಅಮೃತ್ ಮಹಲ್‌ಗೆ ಸೇರಿದ ಒಟ್ಟು ಜಾಗವೆಷ್ಟು; (ವಿವರ ನೀಡುವುದು) ಸದರಿ ಜಮೀನಿನಲ್ಲಿ ಎಷ್ಟು ಎಕರೆ ಒತ್ತುವರಿಯಾಗಿದೆ; ಎಷ್ಟು ಜಮೀನನ್ನು ಮೈಸೂರು ಮಿನರಲ್ಸ್ ಸಂಸ್ಥೆಗೆ ನೀಡಲಾಗಿದೆ;

(ಆ) ಸದರಿ ಜಮೀನನ್ನು ಮೈಸೂರು ಮಿನರಲ್ಸ್ ಸಂಸ್ಥೆಗೆ ಯಾವಾಗ, ಯಾವ ಮಾರ್ಗಸೂಚಿಗಳನ್ವಯ ಮತ್ತು ಎಷ್ಟು ವರ್ಷಗಳಿಗೆ ನೀಡಲಾಗಿದೆ; (ಸರ್ಕಾರದ ಆದೇಶಗಳನ್ನು ನೀಡುವುದು)

(ಇ) ಸದರಿ ಜಮೀನನ್ನು ಮೈಸೂರು ಮಿನರಲ್ಸ್ ಸಂಸ್ಥೆಗೆ ನೀಡುವಾಗ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳೇನು; (ವಿವರ ನೀಡುವುದು)

(ಈ) ಸದರಿ ಜಮೀನಿನಲ್ಲಿ ಗಣಿಗಾರಿಕೆ ನಡೆಯುತ್ತಿರುವುದರಿಂದ ರಾಯಸಂದ್ರ ಕಾವಲಿನಲ್ಲಿ ತಳಿ ಸಂವರ್ಧನೆ ಕಾರ್ಯಗಳನ್ನು ಕೈಗೊಳ್ಳಲು ಮತ್ತು ರಾಸುಗಳ ಬೆಳವಣಿಗೆಗೆ ಮತ್ತು ಇತರೆ ಪೂರಕ ಚಟುವಟಿಕೆಗಳಿಗೆ ತೊಂದರೆಗಳಾಗಿವೆಯೇ; (ವಿವರ ನೀಡುವುದು)

(ಉ) ರಾಯಸಂದ್ರ ಅಮೃತಮಹಲ್ ತಳಿ ಸಂವರ್ಧನ ಉಪ ಕೇಂದ್ರದ ಕೊಟ್ಟಗೆಯ ತಗ್ಗು ಪ್ರದೇಶದಲ್ಲಿದ್ದು ಕೊಟ್ಟಿಗೆಯ ಮೇಲ್ಛಾವಣಿಯು ಭಾಗಶಃ ಇರುವುದರಿಂದ ಹೆಚ್ಚು ಮಳೆಯಾಗದ ಮಣ್ಣು ಮಿಶ್ರಿತ ನೀರು ಕೊಟ್ಟಿಗೆಗೆ ನುಗ್ಗಿ ಜಾನುವಾರುಗಳಿಗೆ ಬಹಳ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?